ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಚುಕ್ಕೆ ಗುರುತಿಲ್ಲದ ಪ್ರಶ್ನೆ : 647
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ. ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
4. ಉತ್ತರಿಸಬೇಕಾದ ದಿನಾಂಕ : 17-09-2021

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಕಾಫಿ, ಅಡಿಕೆ ಮತ್ತು ಸಾಂಬಾರು ಬೆಳೆಗಳನ್ನು ಬೆಳೆಯುವ ರೈತರು ಅಕಾಲಿಕ ಮಳೆ ಮತ್ತು ಅತಿವೃಷ್ಟಿಯಿಂದ ತುಂಬಾ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ)	ಹಾಗಿದ್ದಲ್ಲಿ, ಈ ರೈತರುಗಳ ನೆರವಿಗೆ ಸರ್ಕಾರ ಯಾವುದಾದರು ವಿಶೇಷ ಯೋಜನೆಗಳನ್ನು ರೂಪಿಸಿದೆಯೇ:	ಈ ರೈತರುಗಳ ನೆರವಿಗೆ ಸರ್ಕಾರವು NDRF/SDRF, MGNREGA, NHM, Coffee Board ಹಾಗು ರಾಜ್ಯ ವಲಯ ಯೋಜನೆಗಳಡಿ ಸಹಾಯ ನೀಡಲಾಗುತ್ತಿದೆ.
ಇ)	ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ: (ಯೋಜನೆವಾರು ವಿವರಗಳನ್ನು ನೀಡುವುದು)	ಈ ಕೆಳಕಂಡಂತೆ ಸವಲತ್ತುಗಳನ್ನು ಕಲ್ಪಿಸಲಾಗಿರುತ್ತದೆ. 1. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ (MGNREGA) ಯೋಜನೆಯಡಿ ಕಾಫಿ, ಅಡಿಕೆ ಮತ್ತು ಸಾಂಬಾರು ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮಕ್ಕೆ ಈ ಕೆಳಕಂಡಂತೆ ಆರ್ಥಿಕ ನೆರವು ಒದಗಿಸಲಾಗುತ್ತಿದೆ.

ಕ್ರ. ಸಂ.	ಬೆಳೆಗಳು	ಸಹಾಯಧನದ ಮೊತ್ತ/ಹೆ. (ರೂ.ಲಕ್ಷಗಳಲ್ಲಿ)
1.	ಕಾಫಿ (ಅರೆಬಿಕಾ)	184675.00
2.	ಕಾಫಿ (ರೊಬುಸ್ಟಾ)	113347.00
3.	ಅಡಿಕೆ	258961.00
4.	ದಾಲ್ಚಿನ್ನಿ	149190.00
5.	ಲವಂಗ	44432.00
6.	ಕಾಳುಮೆಣಸು(ಅಡಿಕೆ ತೋಟದಲ್ಲಿ)	118500.00
7.	ಕಾಳುಮೆಣಸು(ತೆಂಗಿನ ತೋಟದಲ್ಲಿ)	21536.00
8.	ಚಕ್ಕೆ	149140.00

9.	ಜಾಯಿಕಾಯಿ	26829.00

2. ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಯೋಜನೆಯಡಿ

ಅ) ಸಾಂಬಾರು ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮಕ್ಕೆ ಈ ಕೆಳಕಂಡಂತೆ ಸಹಾಯಧನ ಒದಗಿಸಲಾಗುತ್ತಿದೆ.

ಕ್ರ. ಸಂ.	ಬೆಳೆಗಳು	ಸಹಾಯಧನದ ಮೊತ್ತ/ಹೆ. (ರೂ.ಲಕ್ಷಗಳಲ್ಲಿ)
1.	ಲವಂಗ	20000.00
2.	ಕಾಳುಮೆಣಸು	20000.00
3.	ಚಕ್ಕೆ	20000.00
4.	ಜಾಯಿಕಾಯಿ	20000.00

ಆ) ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ (IPM/INM) ಕಾರ್ಯಕ್ರಮದಡಿ ರೂ.4000/ಹೆ. ಘಟಕ ವೆಚ್ಚಕ್ಕೆ ಶೇ.30ರಂತೆ ರೂ.1200/ಹೆ. ಗೆ ಗರಿಷ್ಟ 4 ಹೆ. ವರೆಗೆ ಸಹಾಯಧನ ನೀಡಲಾ ಗುತ್ತಿದೆ.

3. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ (PMKSY) ಯೋಜನೆಯಡಿ ಅಡಿಕೆ ಮತ್ತು ಸಾಂಬಾರು ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆಗೆ ಸಣ್ಣ ಮತ್ತು ಅತಿ ಸಣ್ಣ,ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ 2 ಹೆಕ್ಟೇರ್ ವರೆಗೆ ಶೇ.90ರಷ್ಟು ಹಾಗೂ 2 ರಿಂದ 5 ಹೆಕ್ಟೇರ್ ವರೆಗೆ ಶೇ.45ರಷ್ಟು ಸಹಾಯಧನವನ್ನು ಮತ್ತು ಇತರೆ ವರ್ಗದ ರೈತರಿಗೆ 5 ಹೆಕ್ಟೇರ್ ವರೆಗೆ ಶೇ.45ರಷ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.

4. ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ.75 ರಷ್ಟು (ರೂ.7500/ಹೆ.) ಹಾಗೂ ಪ.ಜಾ/ಪ.ಪಂ. ವರ್ಗದ ಫಲಾನುಭವಿಗಳಿಗೆ ಶೇ.90ರಷ್ಟು (ರೂ.9000/ಹೆ.) ರಂತೆ ಗರಿಷ್ಟ 2 ಹೆಕ್ಟೇರ್ ವರೆಗೆ ಮಾತ್ರ ಸಹಾಯಧನ ಒದಗಿಸಲಾಗುತ್ತಿದೆ.

<u>ಕಾಫಿ ಮಂಡಳಿ</u>

ಕಾಫಿ ಮಂಡಳಿ ಬೆಂಗಳೂರುರವರುರವರ ವತಿಯಿಂದ ಈ ಕೆಳಕಂಡ ಅಭಿವೃದ್ಧಿ ಉತ್ತೇಜಿತ ಕಾರ್ಯಕ್ರಮಗಳನ್ನು 10 ಹೆ. ವರೆಗೆ ಹೊಂದಿರುವ ಸಣ್ಣ ರೈತರುಗಳಿಗೆ ಘಟಕದ ವೆಚ್ಚಕ್ಕೆ ಶೇ. 40 ರಷ್ಟು ಆರ್ಥಿಕ ನೆರವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ಒದಗಿಸಲಾಗಿರುತ್ತದೆ:

1) ತೋಟ ಮರು ಸ್ಥಾಪನೆ: ಕಾಫಿ ತೋಟಗಳಲ್ಲಿ ಉತ್ಪಾದನೆ

		ಹಾಗೂ ಉತ್ಪಾದಕತೆ ಹೆಚ್ಚಿಸುವ ಸಲುವಾಗಿ ಹಳೆಯ ಮತ್ತು ಅನುತ್ಪಾದಕ ಕಾಫಿ ತೋಟಗಳ ಪುನರುಚ್ಚೀವನ ಕಾರ್ಯಕ್ರಮವಾಗಿ ರೋಗ ನಿರೋಧಕ ಹಾಗೂ ಹೆಚ್ಚಿನ ಇಳುವರಿ ನೀಡುವ ಕಾಫಿ ತಳಿಗಳ ನಾಟಿ ಮಾಡಲು ಸಹಾಯಧನ ಕಲ್ಪಿಸಲಾಗಿರುತ್ತದೆ. 2) **ನೀರು ನಿರ್ವಹಣೆ ಘಟಕ:** ನೀರು ಶೇಖರಣಾ ಘಟಕಗಳ ಸ್ಥಾಪನೆಗೆ /ಯಂತ್ರೋಪಕರಣ ಖರೀದಿಗೆ ಆರ್ಥಿಕ ನೆರವು ಕಲ್ಪಿಸಲಾಗಿರುತ್ತದೆ. 3) **ಪರಿಸರ ಸ್ನೇಹಿ ಕಾಫಿ:** ರೈತರು ಹೆಚ್ಚಿನ ಆದಾಯಗಳಿಸಲು ಅನುಕೂಲವಾಗುವಂತೆ ಪರಿಸರ ಸ್ನೇಹಿ ಕಾಫಿ ಉತ್ಪಾದನೆಯ ಪ್ರಮಾಣೀಕರಣಕ್ಕೆ ಶೇ. 50 ರಂತೆ ಪ್ರಮಾಣೀಕರಣದ ವೆಚ್ಚವನ್ನು ಭರಿಸಲಾಗಿರುತ್ತದೆ. 4) **ಕಾಫಿ ಬೆಳೆಗಾರರ ಗುಂಪು/ಸ್ವಯಂ ಸೇವಕ ಸಂಘಗಳು/ಸಹಕಾರ ಸಂಘಗಳಿಗೆ ಪ್ರೋತ್ಸಾಹಧನ:** ಕಾಫಿ ಮಾರುಕಟ್ಟೆಗೆ ಉತ್ತೇಜಿಸಲು ಸಮುದಾಯತ್ವದಲ್ಲಿ ಕಾಫಿ ಬೆಳೆಗಾರರ ಗುಂಪು/ಸ್ವಯಂ ಸೇವಕ ಸಂಘಗಳು/ಸಹಕಾರ ಸಂಘಗಳಿಗೆ ಪ್ರತಿ ಕೆಜಿ ಕಾಫಿಗೆ ರೂ.4.00 ರಂತೆ ಪ್ರೋತ್ಸಾಹಧನವನ್ನು ನೀಡಲಾಗಿರುತ್ತದೆ.
ಈ)	ಅಕಾಲಿಕ ಮಳೆ ಮತ್ತು ಅತಿವೃಷ್ಟಿಯಿಂದ ನಷ್ಟಕ್ಕೊಳಗಾಗುವ ರೈತರಿಗೆ ಸರ್ಕಾರದಿಂದ ಯಾವ ರೀತಿಯ ಸಹಾಯವನ್ನು ಮಾಡಲಾಗುವುದು? (ವಿವರಗಳನ್ನು ನೀಡುವುದು)	ಅಕಾಲಿಕ ಮಳೆ ಮತ್ತು ಅತಿವೃಷ್ಟಿಯಿಂದ ನಷ್ಟಕ್ಕೊಳಗಾಗುವ ರೈತರಿಗೆ ರಾಷ್ಟ್ರೀಯ/ ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ವಾರ್ಷಿಕ ಮಳೆಯಾಶ್ರಿತ ಬೆಳೆಗಳಿಗೆ ರೂ. 6800 ಪ್ರತಿ ಹೆ., ವಾರ್ಷಿಕ ನೀರಾವರಿ ಬೆಳೆಗಳಿಗೆ ರೂ.13500 ಪ್ರತಿ ಹೆ. ಮತ್ತು ಬಹುವಾರ್ಷಿಕ ಬೆಳೆಗಳಿಗೆ ರೂ.18000 ಪ್ರತಿ ಹೆ., ರಂತೆ ಪ್ರತಿ ಫಲಾನುಭವಿಗೆ ಗರಿಷ್ಠ 2.00 ಹೆಕ್ಟೇರ್ ವರೆಗೆ ಕಂದಾಯ ಇಲಾಖೆಯ ಮುಖಾಂತರ ಪರಿಹಾರಧನ ವಿತರಿಸಲಾಗುತ್ತಿದೆ.

No.HORTI 382 HGM 2021

(ಪ್ರಿಯಾ ರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.